ತಿಂಗಳಾ ಪಗಾರ ಕೊಡತದ. ಆಯ್ತುವಾರ, ಹಬ್ಬಗೊಳು, ಬ್ಯಾಸಿಗಿ ಅಂತ ವರ್ಷನ್ಯಾಗ ಆರು ತಿಂಗಳು ಕೆಲಸ ಮಾಡದೆ ಪಗಾರ ತಗೋತಿರಿ. ರೈತ ಹಗಲ- ರಾತ್ರಿ ಭೇದ ಇಲ್ಲದಂಗ ದುಡಿಬೇಕು. ಬಿಸಿಲ, ಮಳಿ, ಚಳಿಗಿ ಮೈಯೊಡ್ಡಬೇಕು. ಇಷ್ಟೆಲ್ಲ ದುಡಿದರ ಏನು ಸಿಗತದ. ಬೆಳೆದ ಬೆಳಿ ಸಾಲಕ್ಕ ಸಾಕಾಗವಲ್ಲದು. ಹೊಟ್ಟಿ ತುಂಬಿದ ನಿಮ್ಮಂಥವರಿಗೆ ಹಸಿದವರ ಸಂಕಟ ಏನು ಗೊತ್ತದ. ಓದಿದವರು ಪಾಠ ಮಾಡ್ತೀರಿ ಅಂತ ನನಗ ಬುದ್ದಿ ಹೇಳಲಿಕ್ಕಿ ಬರಬ್ಯಾಡರಿ' ಎಂದವನೇ ಬಸವರಾಜಪ್ಪ ಎದ್ದು ಹೆಗಲ ಮೇಲಿನ ವಸ್ತ್ರವನ್ನೊಮ್ಮೆ ಝಾಡಿಸಿ ಅಂಗಳ ದಾಟಿ ಹೊರಹೋದ.

ರಾಮಚಂದ್ರ ಮೇಷ್ಟ್ರಿಗೆ ನಿಂತ ನೆಲ ಕುಸಿದಂತಾಯಿತು. ಎಂದೂ ಇಷ್ಟೊಂದು ಸದರದಿಂದ ಬಸವರಾಜಪ್ಪ ಅವರೊಂದಿಗೆ ವರ್ತಿಸಿರಲಿಲ್ಲ. ಅವಮಾನವಾದಂತಾಗಿ ಮೇಷ್ಟ್ರು ತಲೆತಗ್ಗಿಸಿ ಹೊರನಡೆದರು. ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡಲೆಂದು ಪುಸ್ತಕ ಕೈಗೆ ತೆಗೆದುಕೊಂಡ ಮೇಷ್ಟ್ರ ಕಿವಿಯಲ್ಲಿ ಬಸವರಾಜಪ್ಪನ ಮಾತುಗಳೇ ಗುಂಯ್ ಗುಡತೊಡಗಿದವು. ಇನ್ನು ಪಾಠ ಮಾಡುವುದು ಸಾಧ್ಯವಿಲ್ಲ ಎನಿಸಿ ಮನೆಗೆ ಬಂದವರು ಕೋಣೆಯಲ್ಲಿ ಅಡ್ಡಾಗಿದ್ದರು.

* * *

'ಮೇಷ್ಟ್ರ ಎದುರು ಅಷ್ಟೊಂದು ಒರಟಾಗಿ ಮಾತಾಡಬಾರದಿತ್ತು. ಪಾಪ ತುಂಬಾ ನೊಂದಕೊಂಡಂಗ ಕಾಣತದ. ಅವರು ಹೇಳಿದರಾಗ ಏನು ತಪ್ಪ ಅದಾ. ಜಮೀನು ಮಾರಿದರ ನಾಲ್ಕು ದುಡ್ಡು ಕೈಗಿ ಬರಬಹುದು. ಆದರ ಕೂತು ಉಂಡರ ಕುಡುಕೆ ಹೊನ್ನು ಸಾಲದು ಅಂತ ತಿಳಿದವರು ಹೇಳ್ಯಾರ. ಕೈಯಾಗಿನ ರೊಕ್ಕ ಖರ್ಚಾದ ಮ್ಯಾಲ ಕೂಲಿ ಮಾಡಬೇಕಾಗತದ. ಇನ್ನು ಮಗಳ ಬಸರ ಬಾಣಂತನ ಅಂತ ಖರ್ಚುಗೋಳು ಅವಾ. ಮಗನ ಮದಿ ಮಾಡಬೇಕು. ಓದು ಬ್ಯಾಡ ಅಂತ ಅವನಿಗೂ ಒಕ್ಕಲುತನಾನೇ ಬದುಕಿನ ದಾರಿ ಮಾಡೀರಿ. ಇನ್ನು ಅವನಿಗಿ ಎಲ್ಲಿ ಕೆಲಸ ಸಿಗತದ. ಮೇಷ್ಟ್ರು ನಮ್ಮ ಒಳ್ಳೆದಕ್ಕೆ ಹೇಳ್ಯಾರ. ಜಮೀನು ಪರಭಾರೆ ಮಾಡೋ ವಿಚಾರ ಬ್ಯಾಡ. ಬಾವಿನೋ ಬೋರೋ ತೆಗೆಸಿದರಾಯಿತು. ನೀರಾದರ ಅನುಕೂಲ ಆಗತದ. ಮೇಷ್ಟ್ರಿಗೆ ಹೋಗಿ ಆಡಿದ್ದು ತಪ್ಪಾಯಿತು ಅಂತ ಕೇಳರಿ. ಕ್ಷಮಿಸುವಂಥ ದೊಡ್ಡ ಗುಣ ಅವರದು ಅದಾ' ಊಟ ಬಡಿಸುವಾಗ ಹೆಂಡತಿ ಪಾರ್ವತಿ ಹೇಳಿದ ಮಾತು ಕೇಳಿ ಬಸವರಾಜಪ್ಪನಿಗೆ ಅವಳ ಮಾತಿನಲ್ಲೂ ಸತ್ಯವಿದೆ ಎನಿಸಿತು.

ಕಲಬುರಗಿಗೆ ಸಮೀಪದ ಕುಮಸಿ ಗ್ರಾಮದಲ್ಲಿ ಪಿತ್ರಾರ್ಜಿತವಾಗಿ ಬಂದ ನಾಲ್ಕೆಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಉಡಲು, ಉಣ್ಣಲು ಕಡಿಮೆ ಇಲ್ಲದಂತೆ ಸಂಸಾರದ ಬಂಡಿ ಎಳೆಯುತ್ತಿದ್ದ ಬಸವರಾಜಪ್ಪ, ಒಂದು ಕಾಲದಲ್ಲಿ ಪ್ರಗತಿಪರ ರೈತನೆಂದು ಸುತ್ತಲಿನ ಫಾಸಲೆಯಲ್ಲಿ ಹೆಸರು ಗಳಿಸಿದ್ದ. ಜಮೀನಿನ ಮೇಲ್ಭಾಗದಲ್ಲಿದ್ದ ಕೆರೆಯಿಂದ ಕಾಲುವೆಯ ಮೂಲಕ ಹರಿದು ಬರುತ್ತಿದ್ದ ನೀರಿನಿಂದ ವರ್ಷದಲ್ಲಿ ಮೂರು ಬೆಳೆಗಳನ್ನು ಬೆಳೆಯಲು ಅನುಕೂಲವಿತ್ತು. ತೊಗರಿ, ಜೋಳ, ಕಡಲೆ ಜೊತೆಗೆ ಬೇಸಿಗೆಯಲ್ಲಿ ತರಕಾರಿ, ಗೋಧಿ ಬೆಳೆದು ಬಸವರಾಜಪ್ಪ ತಕ್ಕಮಟ್ಟಿಗೆ ಸ್ಥಿತಿವಂತನೆನಿಸಿದ್ದ. ಇಡೀ ಕುಟುಂಬ ಹೊಲದಲ್ಲಿ ದುಡಿಯುತ್ತಿದ್ದುದ್ದರಿಂದ ಆದಾಯದ ಮೂಲ ಹೆಚ್ಚಾಗಿತ್ತು. ಪಿಯುಸಿ ಓದು ಮುಗಿದದ್ದೇ ಮಗಳನ್ನು ಪಕ್ಕದೂರಿನ ಕಲ್ಲಹಂಗರಗಾ ಗ್ರಾಮದಲ್ಲಿ ಪ್ರಗತಿಪರ ರೈತನೆಂದು

